ಮಾಡೋದನ್ನೇ ಮಾಡುವುದು ಎಂದು ಹೇಳಿ ಹೋದನಂತೆ. ಇಂಥವರಿಗೆ ಸರ್ಕಾರ ರಕ್ಷಣೆ ಕೊಡ ಬಾರದು. ಸರ್ಕಾರದ ಕಾಯಿದೆಯನ್ನು ಮೀರಿ ಇವರು ಇಂಡಸ್ಟ್ರಿಗಳನ್ನು ನಡೆಸುತ್ತಾರೆ. ನೌಕರರನ್ನು ಬಾಂಡೆಡ್ ಲೇಬರ್ಸ್ ಎಂದು ಕರೆಯುವ ಮಾಲೀಕರಿಗೆ ಬುದ್ಧಿ ಹೇಳಬೇಕಾಗುತ್ತದೆ. ಪೋಲೀಸರೂ ತಪ್ಪು ಮಾಡಿದ್ದಾರೆ. ಎಸ್. ಐ. ನಾಗರಾಜ್ ಎನ್ನುವ ವ್ಯಕ್ತಿ ತನ್ನ ತ್ವಂತ ಸಂಸ್ಕೃತ ಭಾಷೆಯಲ್ಲಿ ನಿವೃತ್ತಿ ಪತ್ರ ಮಾಡುತ್ತೇನೆ ಎಂದಿದ್ದಾನೆ. ನೌಕರರು ಕೆಲಸಕ್ಕೆ ಹೋಗಲೇಬೇಕು ಎನ್ನುವ ಒತ್ತಡ ತಂದಿದ್ದಾನೆ. ಇವರ ಈ ಅಧಿಕ ಪ್ರಸಂಗತನಕ್ಕೆ ಯಾರು ಲೈಸೆನ್ಸ್ ಕೊಟ್ಟವರು ? ಅದ್ದರಿಂದ ಇದೆಲ್ಲಾ ಏನು ನಡೆದಿದೆ ಇದರ ಬಗ್ಗೆ ಒಬ್ಬ ಹಿರಿಯ ಅಧಿಕಾರಿಯಿಂದ ವಿಚಾರಣೆ ಮಾಡಿಸಬೇಕೆಂಬುದು ನಮ್ಮ ಬೇಡಿಕೆ.

ಶ್ರೀ ಸಿ. ವೀರಣ್ಣ.—ಅಧ್ಯಕ್ಷರೇ, ಪೋಲೀಸರು ಮಿಲ್‌ನ ಮಾಲೀಕರ ಕಡೆಗೂ ಇಲ್ಲ, ಕಾರ್ಮಿಕರ ಕಡೆಗೂ ಇಲ್ಲ. ಅವರದೇನಿದ್ದರೂ ಕಾನೂನು ಮತ್ತು ಶಾಂತಿಪಾಲನೆಯ ಜವಾಬ್ದಾರಿ, ನನ್ನ ಮಿತ್ರರು ಹೇಳಿದ ಈ ಬಗ್ಗೆ ವರದಿಯನ್ನು ಕೊಟ್ಟರೆ ಸೂಕ್ತ ರೀತಿಯಲ್ಲಿ ವಿಚಾರಣೆ ಮಾಡಿ ಕಾನೂನು ಪ್ರಕಾರ ತಪ್ಪಿತಸ್ಥರ ವಿರುದ್ಧ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಯು. ಆರ್. ಭೂಪತಿ.—ಪೋಲೀಸರ ವರ್ತನೆ ಏನಿದೆ ಅದರ ಬಗ್ಗೆ ನಮಗೆ ಸಂಶಯ ಇದೆ. ಅವರಿಂದ ಕರ್ತವ್ಯ ಲೋಪವಾಗಿದೆ ಎಂಬುದು ನಮ್ಮ ದೂರು. ಅಧಿಕಾರಿಗಳು ಕೊಟ್ಟ ವರದಿ ನಿಮಗೆ ಬ್ರಹ್ಮ ವಾಕ್ಯವಿರಬಹುದು. ಆದುದರಿಂದ ಒಬ್ಬ ಹಿರಿಯ ಅಧಿಕಾರಿಯಿಂದ ಇದರ ವಿಚಾರಣೆ ನಡೆಸಿ, ನಾವೇನು ಸಿಓಡಿ ಅಥವಾ ಸಿಬಿಐ ಇನ್‌ವೆಸ್ಟಿಗೇಷನಗಾಗಿ ಕೇಳಂತಿಲ್ಲ.

ಶ್ರೀ ಸಿ. ವೀರಣ್ಣ.—ಅಧ್ಯಕ್ಷರೇ, ನಾನು ಆಗಲೇ ಹೇಳಿದ್ದೇನೆ, ನಿರ್ದಿಷ್ಟ ಆಪಾದನೆಗಳನ್ನಿಳ್ಳ ಬರೆದು ಕೊಡಲಿ, ನಾನು ವಿಚಾರಣೆ ಮಾಡಿಸುತ್ತೇನೆ.

ಖ) ಪ್ರಾಥಮಿಕ ಶಾಲಾ ಶಿಕ್ಷಕರನ್ನು ಶೀಘ್ರ ನೇಮಕಾತಿ ಮಾಡುವುದರ ಬಗ್ಗೆ

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ. ಖಾಲಿ ಇರತಕ್ಕ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಭರ್ತಿ ಮಾಡದೇ ಇರುವುದರಿಂದ ಮಕ್ಕಳ ಶಿಕ್ಷಣಕ್ಕೆ ಆಗಿರತಕ್ಕ ತೊಂದರೆ ಬಗ್ಗೆ ಸನ್ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್.—(ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಶಿಕ್ಷಣವನ್ನು ಜಿಲ್ಲಾ ಪರಿಷತ್ತಿನ ಆಡಳಿತದ ವ್ಯಾಪ್ತಿಯೊಳಗೆ ತಂದ ತರುವಾಯ ಕೆಲವು ಜಿಲ್ಲಾ ಪರಿಷತ್ತುಗಳಂ ನೇಮಕಾತಿ ಸಂಬಂಧದಲ್ಲಿ ಕೆಲವು ಕಾರಣದಿಂದ ಸಮಸ್ಯೆ ಸಂಶಯಗಳನ್ನು ವ್ಯಕ್ತಪಡಿಸಿ ಈ ಬಗ್ಗೆ ಸರ್ಕಾರದಿಂದ ಕೆಲವು ಸ್ಪಷ್ಟನೆ ಬಯಸಿದ್ದು ಸದರಿ ಸಮಸ್ಯೆ ಸಂಶಯಗಳನ್ನು ಈಗ ನಿವಾರಿಸಲಾಗಿದೆ. ಈ ಮಧ್ಯೆ ಮಿತವ್ಯಯದ ಆದೇಶ ಜಾರಿಯಲ್ಲಿದ್ದುದರಿಂದ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯನ್ನು ಭರ್ತಿ ಮಾಡಲಾಗಲಿಲ್ಲ. ಈಗ ಪ್ರಸ್ತುತ ಮಿತವ್ಯಯ ಆದೇಶದ ಕುರಿತು ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕರ ಕೊರತೆಯನ್ನು ಗಮನಿಸಿ ಮಿತವ್ಯಯ ಆದೇಶದಿಂದ ಅವುಗಳಿಗೆ ವಿನಾಯಿತಿ ನೀಡಿ ಖಾಲಿ ಇರುವ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಂ ಈಗಾಗಲೇ ಆದೇಶ ನೀಡಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ —ಮಾನ್ಯ ಸಚಿವರಂ ತಮ್ಮ ಉತ್ತರದಲ್ಲಿ ಈ ಮಧ್ಯೆ ಮಿತವ್ಯಯದ ಆದೇಶ ಜಾರಿಯಲ್ಲಿದ್ದುದರಿಂದ ಖಾಲೀ ಇದ್ದ ಪ್ರಾಥಮಿಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಆಗಲಿಲ್ಲವೆಂದು ಹೇಳಿದ್ದಾರೆ. ಮಕ್ಕಳಿಗೆ ಪಾಠ ಹೇಳತಕ್ಕಂತಹ ಶಿಕ್ಷಕರ ಹುದ್ದೆಗಳನ್ನು ಮಿತವ್ಯಯ ವಿದೆಯೆಂದು ಭರ್ತಿ ಮಾಡಲಿಲ್ಲವೆಂದು ಹೇಳಿದರೆ ಹೇಗೆ ? ಹಣವಿಲ್ಲವೆಂದು ಒಂದು ಹೊತ್ತು ಊಟ ಮಾಡಬೇಡಿ ಎಂದು ಜನರಿಗೆ ಹೇಳತಕ್ಕಂತಹ ಮಾತು ಇದಾಗುತ್ತದೆ. ಶಿಕ್ಷಣದ ವ್ಯವಸ್ಥೆಗೆ ಎಷ್ಟು ಪ್ರಾಧಾನ್ಯತೆ ಇದೆ ಎಂಬುದನ್ನು ಯೋಚನೆ ಮಾಡಬೇಕು. ಶಿಕ್ಷಕರನ್ನು ಭರ್ತಿ ಮಾಡುವುದಕ್ಕೆ ಒಂದು ಸಮಿತಿಯಿತ್ತು. ಅಲ್ಲಿ ಖಾಸಗಿ ಜನರು ಇದ್ದರು ಯಾರೋ ಒಬ್ಬರು ಅಪ್ರಾಮಾಣಿಕರಾದರೆ, ಆ ಸಮಿತಿಯನ್ನೇ ತೆಗೆಯುವುದು ಸರಿಯಲ್ಲ. ಆ ಸಮಿತಿಯವ್ನು ತೆಗೆದು ಅಧಿಕಾರಿಗಳನ್ನು ಅಲ್ಲಿಗೆ ನೇಮಕ ಮಾಡಿದ್ದೀರಿ.

ಶ್ರೀ ಬಿ. ಸೋಮಶೇಖರ್.—ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮೂಲಕ್ಕೆ ಹೋಗುತ್ತಿದ್ದಾರೆ. ದೇವರು ಎಲ್ಲಿದ್ದಾನೆಂದು ಕೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ವೇದಾಂತ ಹೆಮ್ಮಿಗೆ.—ಶಿಕ್ಷಕರನ್ನು ಏಕೆ ನೇಮಕ ಮಾಡಲಿಲ್ಲವೆಂದು ನಾವು ಕೇಳುತ್ತಿರುವುದು. ಆ ಸಮಿತಿಯಲ್ಲಿನ ಖಾಸಗೀ ಸದಸ್ಯರನ್ನು ತೆಗೆದು ಅಲ್ಲಿಗೆ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಅಧಿಕಾರಿಗಳು ಸತ್ಯಹರಿಶ್ಚಂದ್ರರೆಂದು ನಿಮ್ಮ ಭಾವನೆಯೇ ? ಖಾಸಗೀ ಜನರ ಕೈಯಲ್ಲಿ ಈ ಕೆಲಸವಾಗಂತ್ತಿರಲಿಲ್ಲವೆಂದು ನಿಮ್ಮ ಭಾವನೆಯೇ ? ಜೂನ್ ಒಂದಕ್ಕೆ ಬೇಸಿಗೆ ರಜ ಮುಗಿಯುತ್ತದೆ. ಶಾಲೆಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು. ಹಳ್ಳಿಗಳಲ್ಲಿ ಶಿಕ್ಷಕರ ಹುದ್ದೆಗಳನ್ನು ಯಾವಾಗ, ಎಷ್ಟು ದಿವಸದಲ್ಲಿ ಭರ್ತಿ ಮಾಡುತ್ತೀರಿ ಮತ್ತು ಬೇಗ ಹಾಕಿರುವಂತಹ ಶಾಲೆಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಅಧ್ಯಕ್ಷರು.—ಸ್ಪಷ್ಟವಾದ ಉತ್ತರವನ್ನು ಸಚಿವರು ಕೊಟ್ಟಿದ್ದಾರೆ ನಿಮಗೆ ಇನ್ನೇನು ಬೇಕು, ಭಾಷಣ ಬೇಡ, ಕ್ಲಾರಿಫಿಕೇಷನ್ ಕೇಳಿ.

ಶ್ರೀ ಡಿ. ಟಿ. ಜಯಕುಮಾರ್.—ಉತ್ತರವನ್ನು ಸರಿಯಾಗಿ ಕೊಟ್ಟಿದ್ದಾರೆಂದು ತಾವೇ ಹೇಳುತ್ತಿದ್ದೀರಿ ನಾವು ಏನು ಕೇಳಬೇಕು. ಶಾಲೆಗಳು ಇನ್ನೂ ಪ್ರಾರಂಭವಾಗಿಲ್ಲ ಶಿಕ್ಷಕರ ನೇಮಕವಾಗಿಲ್ಲ. ಇದನ್ನು ಮುಂದಿನ ವರ್ಷದ ತನಕ ಮಾಡುತ್ತೀರಾ ?

ಶ್ರೀ ಬಿ. ಸೋಮಶೇಖರ್.— ಹಿಂದೆ ವಾನ್ಯ ವೆಂಕಟರಾಮಯ್ಯನವರು ಇದೇ ಪ್ರಶ್ನೆಯನ್ನು ಕೇಳಿದ್ದರು. ಆಗ ಸ್ಪಷ್ಟವಾದ ಉತ್ತರವನ್ನು ಹೇಳಿದ್ದೇನೆ. ಈಗಾಗಲೇ ಶಿಕ್ಷಕರ ನೇಮಕಾತಿ ಸಮಿತಿಗಳು ಕೆಲಸ ಮಾಡಬೇಕೆಂದು ಆದೇಶ ನೀಡಿದ್ದೇವೆ. ಒಂದು ತಿಂಗಳೊಳಗಾಗಿ ಸಂದರ್ಶನ ಕರೆಯುಬೇಕೆಂದು ಹೇಳಿ ವ್ಯವಸ್ಥೆ ಮಾಡಿದ್ದೇವೆ. ಸಂದರ್ಶನವನ್ನು ಕರೆಯುತ್ತಾರೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.— ನೀವು ಹೇಳಿ ೧೫ ದಿವಸವಾಯಿತು.

ಶ್ರೀ ಡಿ. ಎ. ಚನ್ನಪ್ಪ.— ಮಾನ್ಯ ಅಧ್ಯಕ್ಷರೇ, ಇದು ಎಷ್ಟಳ.....

ಅಧ್ಯಕ್ಷರು.— ನಿಮಗೆ ಎಷ್ಟು ಸಾರಿ ಹೇಳಿಕೊಡಬೇಕು ? ಯಾರು ಕಾಲಿಂಗ್ ಕೇಳಿದ್ದಾರೆ, ಅವರು ಮಾತ್ರ ಕ್ಲಾರಿಫಿಕೇಷನ್ ಕೇಳಬೇಕು.

ಶ್ರೀ ಡಿ. ಟಿ. ಜಯಕುಮಾರ್.— ನೀವು ಕೋಪಿಸಿಕೊಳ್ಳಬೇಡಿ. ಸರಿಯಾದ ಕ್ಲಾರಿಫಿಕೇಷನ್ ಅನ್ನು ಅವರು ಕೊಡಲಿ, ಈ ರೀತಿಯ ಉತ್ತರ ಒಂದು ವರ್ಷದಿಂದ ಬರುತ್ತಿದೆ. ಹಿಂದೆ ಇದೇ ರೀತಿ ಪ್ರಶ್ನೆ ಹಾಕಿದಾಗ ಮುಂದಿನ ಒಂದು ತಿಂಗಳಲ್ಲಿ ಮಾಡಿಕೊಡುತ್ತೇವೆಂದು ಹೇಳಿದರು. ಆದರೆ ಒಂದು ವರ್ಷ ಕಳೆದರೂ ಕೂಡ ಆಗಿಲ್ಲ. ಒಂದನೇ ತಾರೀಖಿನಿಂದ ಶಾಲೆ ಪ್ರಾರಂಭವಾಗುತ್ತದೆ. ಡಿ. ಎಲ್. ಆರ್. ಸಿ. ಯಲ್ಲಿ ಇದ್ದವರನ್ನು ಚೇಂಜ್ ಮಾಡಿದ್ದಾರೆ, ಇವರು ಸಂದರ್ಶನ ಕರೆಯುವುದು ಯಾವಾಗ ಅವರನ್ನು ಆಯ್ಕೆ ಮಾಡಿ ಆಜ್ಞೆ ಹೊರಡಿಸುವುದು ಯಾವಾಗ ? ಬಿಟ್ಟಿ ಪುಸ್ತಕ, ಸಮವಸ್ತ್ರ ಕೊಡುತ್ತಾರೆಂದು ಈಗ ಪ್ರತಿಯೊಂದು ತರಗತಿಗೆ ೧೫೦-೨೦೦ ಹುಡುಗರು ಬರುತ್ತಿದ್ದಾರೆ. ಇಷ್ಟು ಜನ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರು ಸಾಕೆ ? ಶಾಲೆ ಕಟ್ಟಡ ನಮಗೆ ಬೇಕಾಗಿಲ್ಲ, ಬೋರ್ಡ್ ಬಳಪ ಕೇಳುತ್ತಿಲ್ಲ. ಉಪಾಧ್ಯಾಯರಾದರೂ ಇರಬೇಕು. ಒಂದು ತಿಂಗಳಲ್ಲಿ ಉಪಾಧ್ಯಾಯರ ನೇಮಕಾತಿ ಮಾಡುವುದಕ್ಕೆ ಸಾಧ್ಯವಾಗಂತ್ತದೆಯೇ ? ಆಗುವುದಿಲ್ಲ. ಡಿ. ಎಲ್. ಆರ್. ಸಿ. ಯಿಂದ ಇದನ್ನು ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ. ಸೋಮಶೇಖರ್.— ಸ್ಪಷ್ಟವಾದ ಉತ್ತರವನ್ನು ಈಗಾಗಲೇ ಕೊಟ್ಟಿದ್ದೇನೆ. ಸಂದರ್ಶನ ಕರೆಯಬೇಕೆಂದು ಆದೇಶ ಹೊರಡಿಸಿದ್ದೇವೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.— ಹಿಂದೆ ಖಾಸಗೀ ಶಾಲೆಗಳಲ್ಲಿ ಹುದ್ದೆಗಳು ಖಾಲೀ ಇದ್ದ ಪಕ್ಷದಲ್ಲಿ ಅದನ್ನು ಭರ್ತಿ ಮಾಡಲಿಕ್ಕೆ ಖಾಸಗೀ ಶಾಲೆಯ ಮುಂಡಲಿಯವರೇ ಶಿಫಾರಸ್ಸು ಮಾಡಿ ಕಳಿಸುತ್ತಿದ್ದು ಇಲಾಖೆಯವರು ಅದನ್ನು ಅನುಮೋದನೆ ಮಾಡುವ ಪದ್ಧತಿ ಇತ್ತು. ಈಗ ಅದನ್ನು ರದ್ದು ಮಾಡಿ ಜಿಲ್ಲಾ ಸಮಿತಿಗಳನ್ನು ನೇಮಕ ಮಾಡಿದ್ದಾರೆ.ಆದ್ದರಿಂದ ಇಷ್ಟು ವಿಳಂಬವಾಗಲಿಕ್ಕೆ ಕಾರಣವಾಗಿದೆ

ಎಂದು ನನ್ನ ಅನಿಸಿಕೆ ದಯವಿಟ್ಟು ಹಿಂದೆ ಅನುಸರಿಸಿದ್ದ ಪದ್ಧತಿಯನ್ನೇ ಈಗಲೂ ಕೂಡಾ ಅನುಸರಿಸಿ ವುದು ಸೂಕ್ತ ಎಂದು ನನ್ನ ಸಲಹೆ.

ಅಧ್ಯಕ್ಷರು.— ಮಾನ್ಯ ಜಯಕುಮಾರ್‌ರವರೇ, ವಿವರಣೆ ಎಂದರೆ ಎಂದು ಆದೇಶ ನೀಡಲಾಗಿದೆ ಏನು ಆದೇಶ ಯಾವ ಆರ್ಡರ್ ಪ್ರಕಾರ ನೀಡಿದ್ದೀರಿ ಈ ರೀತಿ ವಿವರಣೆಯನ್ನು ತಾವು ಕೇಳಬೇಕು.

(ಗೊಂದಲ)

ಅಧ್ಯಕ್ಷರು.— ಇದು ಕಾಲಿಂಗ್ ಅಟೆನ್‌ಷನ್, ತಾವು ಕೇಳುವುದಕ್ಕೆ ಬರುವುದಿಲ್ಲ ಕೂಡ್ರಿ.

ಶ್ರೀ ಬಿ. ಸೋಮಶೇಖರ್.— ಅಧ್ಯಕ್ಷರೇ, ಹೋದ ಸಾರಿ ಮಾನ್ಯ ವೆಂಕಟರಾಮಯ್ಯನವರಿಗೆ ಉತ್ತರ ಕೊಟ್ಟಿದ್ದಕ್ಕೂ ಇದಕ್ಕೂ ಬಹಳ ವ್ಯತ್ಯಾಸ ಇದೆ. ಹೋದ ಸಾರಿ ಆರ್ಥಿಕ ವಿಷಯವು ಇದ್ದುದರಿಂದ ಸ್ವಲ್ಪ ವಿಳಂಬವಾಯಿತು. ಈಗ ಮಾನ್ಯ ಮುಖ್ಯ ಮಂತ್ರಿಗಳು ಸ್ವಲ್ಪ ದೊಡ್ಡ ಮನಸ್ಸು ಮಾಡಿ ಶಿಕ್ಷಕರ ಬಗ್ಗೆ ವಿನಾಯಿತಿಯನ್ನು ತೋರಿಸಿದ್ದಾರೆ. ಈಗಾಗಲೇ ಆದೇಶವನ್ನು ಸಹಾ ಹೊರಡಿಸಿದ್ದೇವೆ. ಸಂದರ್ಶನ ಮಾಡಬೇಕಾಗಿದೆ. ಒಂದು ತಿಂಗಳಲ್ಲಿಯೇ ಸಂದರ್ಶನವನ್ನು ಪ್ರಾರಂಭ ಮಾಡುತ್ತೇನೆ. ಆದಷ್ಟು ಶೀಘ್ರವಾಗಿ ಈ ಶಿಕ್ಷಣ ಹುದ್ದೆಯನ್ನು ತುಂಬುತ್ತೇವೆ.

ಶ್ರೀ ಡಿ. ಟಿ ಜಯಕುಮಾರ್.— ಅಧ್ಯಕ್ಷರೇ, ಇದು ಬಡ ಮಕ್ಕಳ ವಿಚಾರ. ಹಳ್ಳಿಗಾಡು ಗಳಲ್ಲಿ ಬರೀ ಬಡವರ ಮಕ್ಕಳು ಇರುವುದು ಸಾವಿರಾರು ರೂಪಾಯಿಗಳನ್ನು ಕೊಟ್ಟು ಕಾನ್ವೆಂಟ್‌ನಲ್ಲಿ ಆ ಮಕ್ಕಳನ್ನು ಸೇರಿಸಿಲ್ಲ. ಆದ್ದರಿಂದ ದಯವಾಡಿ ಆದಷ್ಟು ಬೇಗ ಈ ಕೆಲಸವನ್ನು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್.— ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯ ಮಂತ್ರಿಗಳು ಗೌರ್ನ್‌ಮೆಂಟ್ ಆರ್ಡರನ್ನು ಅಪ್ರೂವ್ ಮಾಡಿದ ಮೇಲೆ ಯಾವಾಗ ಆರ್ಡರನ್ನು ಹೊರಡಿಸಿದ್ದೀರಿ ? ಅದನ್ನು ಯಾವ ಡೇಟ್‌ಗೆ ಹೊರಡಿಸಿದೆ ಎಂದು ಹೇಳಿದರೆ ಒಳ್ಳೆಯದು.

ಶ್ರೀ ಬಿ. ಸೋಮಶೇಖರ್.— ಮಾನ್ಯ ಅಧ್ಯಕ್ಷರೇ, ೨೦-೫-೮೮ ರಲ್ಲಿ ನಾವು ಆದೇಶವನ್ನು ಹೊರಡಿಸಿದ್ದೇವೆ.

ಅಧ್ಯಕ್ಷರು.— ಈಗ ಕರೆಕ್ಟ್ ಉತ್ತರ ಹೇಳಿದರು. ಈಗ ಶ್ರೀ ಪಂಪಾಪತಿಯವರು, ಶ್ರೀ ಕೆ. ಬಿ. ಶಾಣಪ್ಪನವರು ಹಾಗೂ ಶ್ರೀ ಭೂಪತಿಯವರು ಗಮನ ಸೆಳೆಯುವುದು.

೪) ರಾಜ್ಯದಲ್ಲಿ ರೈತರು ತಮ್ಮ ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಜಾಥಾ ಬಂದಿರುವುದರ ಬಗ್ಗೆ

ಶ್ರೀ ಕೆ ಬಿ. ಶಾಣಪ್ಪ.— ಮಾನ್ಯ ಅಧ್ಯಕ್ಷರೇ, ರಾಜ್ಯದ ರೈತರಿಗೆ ಕೃಷಿಗಾಗುವ ಖರ್ಚು, ಕೃಷಿ ಉತ್ಪನ್ನದಲ್ಲಿನ ಅಂತರ, ಬೇನಾಮಿ ಹಿಡುವಳಿ ಹಾಗೂ ಅರಣ್ಯ ಜಮೀನುಗಳ ಸಾಗುವಳಿದಾರರಿಗೆ ಪಟ್ಟ ಮುಂತಾದ ರೈತರುಗಳ ಬೇಡಿಕೆಗಳಿಗೆ ಬೆಂಗಳೂರಿಗೆ ಜಾಥಾ ಬಂದಿರುವ ಬಗ್ಗೆ ಮಾನ್ಯ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ನೀರಾವರಿ ಮಂತ್ರಿಗಳು). —

ಗಮನ ಸೆಳೆಯುವ ಸೂಚನೆಯಲ್ಲಿ ರಾಜ್ಯದ ರೈತರ ಸಮಸ್ಯೆಗಳನ್ನು ನಾಲ್ಕು ಅಂಶಗಳಲ್ಲಿ ವಿಭಾಗಿಸಲಾಗಿದೆ.

ಅ) ಕೃಷಿಯಲ್ಲಿ ತೊಡಗಿದ ರೈತರಿಗೆ ಆಗುತ್ತಿರುವ ಖರ್ಚು

ಆ) ರೈತರ ಕೃಷಿ ಉತ್ಪನ್ನದ ಬೆಲೆಯಲ್ಲಿನ ಅಂತರ